**ಕ್ರಿಮಿನಲ್ .ಮಿಸ್ ಸಂಖ್ಯೆ -28/2023** **ಪಿ.ಡಬ್ಲ್ಯೂ:-1**

ದಿನಾಂಕಃ **19-10-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು :- ಎದುರುದಾರರ ಪರ ವಕೀಲರಿಂದ :-

ನಾನು ಬಿ.ಕಾಂ. ಪದವೀಧರೆ. ನನಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲು ಬರೆಯಲು ಬರುತ್ತದೆ. ನನ್ನ ತಂದೆಯ ಹೆಸರು ರುದ್ರಯ್ಯ. ನನ್ನ ತಾಯಿಯ ಹೆಸರು ಕವಿತಾ. ನನ್ನ ತಂದೆ ತಾಯಿಗೆ ನಾನು ಮತ್ತು ನನ್ನ ತಮ್ಮ ಇಬ್ಬರ ಮಕ್ಕಳು. ನನ್ನ ತಮ್ಮ ಈಗ ಬಿ.ಇ. ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ನನ್ನ ಮೊಬೈಲ್ ನಂ.9972635948. ಬಾಳೆಹೊನ್ನೂರು ಗ್ರಾಮದಲ್ಲಿ ರಂಭಾಪುರಿ ಶಾಖಾ ಮಠ ಇದೆ ಎಂದರೆ ಸರಿ. ಬಾಳೆಹೊನ್ನೂರು ಗ್ರಾಮದಲ್ಲಿ ರಂಭಾಪುರಿ ಶಾಖಾ ಮಠಕ್ಕೆ ನನ್ನ ಕೌಟುಂಬಿಕ ಸಮಸ್ಯೆಯನ್ನು ಬಗೆಹರಿಸಿಕೊಡುವಂತೆ ಮನವಿಯನ್ನು ಸಲ್ಲಿಸಿರುವುದಿಲ್ಲ. ನನ್ನ ಮದುವೆ 2018 ನೇ ಸಾಲಿನಲ್ಲಿ ಆಗಿದ್ದು, ತದನಂತರ 2018 ರಿಂದ 2021 ನೇ ಸಾಲಿನವರೆಗೂ ನಾನು ನನ್ನ ಗಂಡನ ಮನೆಯಲ್ಲಿ ಇದ್ದೆನು. ನಾನು ನನ್ನ ಗಂಡನ ಮನೆಯಿಂದ ನನ್ನ ತವರು ಮನೆಗೆ 2022 ನೇ ಸಾಲಿನಲ್ಲಿ ಸಂಪೂರ್ಣವಾಗಿ ಬಂದಿರುತ್ತೇನೆ. ತದನಂತರ ನನ್ನ ಗಂಡನ ಮನೆಗೆ ಹೋಗಿರುವುದಿಲ್ಲ. ನಾನು 2022 ನೇ ಸಾಲಿನಲ್ಲಿ ವಕೀಲರ ಮೂಲಕ ತಿಳುವಳಿಕೆ ಪತ್ರವನ್ನು ಕೊಟ್ಟ ನಂತರ ನನ್ನ ಯಜಮಾನರು ಸದರಿ ನೋಟೀಸಿಗೆ ಪ್ರತ್ಯುತ್ತರವನ್ನು ನೀಡಿದ್ದರು ಎಂದರೆ ಸರಿ. ದಿಃ16-02-2023 ರಂದು ಎದುರುದಾರರು ನನಗೆ ಮತ್ತು ನಮ್ಮ ವಕೀಲರಿಗೆ ಪ್ರತ್ಯುತ್ತರವನ್ನು ಕೊಟ್ಟಿದ್ದಾರೆ ಎಂದರೆ ಸರಿ. ಪ್ರತ್ಯುತ್ತರ ನೋಟೀಸಿನಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತು. ನಾನು ಪ್ರತ್ಯುತ್ತರ ನೋಟೀಸನ್ನು ಪಡೆದುಕೊಂಡ ನಂತರ ಎದುರುದಾರರು ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. ನಾನು ಹಿರಿಯ ಸಿವಿಲ್ ನ್ಯಾಯಾಲಯ, ಹೊನ್ನಾಳಿಯಲ್ಲಿ ವಿವಾಹ ವಿಚ್ಛೇದನಾ ಕೋರಿ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನಾ ಕೋರಿ ಅರ್ಜಿಯನ್ನು ಸಲ್ಲಿಸುವ ಪೂರ್ವದಲ್ಲಿ

ಎದುರುದಾರರಿಗೆ ದಾಂಪತ್ಯ ಪುನರ್ಮಿಲನದ ಬಗ್ಗೆ ತಿಳುವಳಿಕೆ ಪತ್ರವನ್ನು ಕೊಟ್ಟಿರುವುದಿಲ್ಲ. ಎದುರುದಾರರೊಂದಿಗೆ ನನ್ನ ಮದುವೆಯ ನಿಶ್ಚಿತಾರ್ಥ ಆದ ನಂತರ ನಾವಿಬ್ಬರೂ ಫೋನ್ ನಲ್ಲಿ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಿದ್ದೆವು ಎಂದರೆ ಸರಿ. ಎದುರುದಾರರೊಂದಿಗೆ ಮದುವೆಯ ಪೂರ್ವದಲ್ಲಿ ಅವರ ಮನಸ್ಥಿತಿಯ ಬಗ್ಗೆ ತಿಳಿದುಕೊಂಡಿರುವ ವಿಚಾರವನ್ನು ಈ ಅರ್ಜಿಯಲ್ಲಿ ಆಗಲೀ ಅಥವಾ ತಿಳುವಳಿಕೆ ಪತ್ರದಲ್ಲಿ ಆಗಲೀ ನಮೂದು ಮಾಡಿರುವುದಿಲ್ಲ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.